**ಹಿರಿಯ ದಿವಾಣಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ**

**ನ್ಯಾಯಾಲಯ, ತಿ. ನರಸೀಪುರ**

**ಸಿಸಿ ಸಂಖ್ಯೆ: 69/2018**

ಚಾ.ಸಾ-01, ಪ್ರಾ.ಸಾ-01

| | | |
|---|---|---|
| ಹೆಸರು | : | ಜಯಮ್ಮ |
| ಗಂಡನ ಹೆಸರು | : | ಪುಟ್ಟಮಾದಯ್ಯ |
| ವಯಸ್ಸು | : | 50 |
| ವೃತ್ತಿ | : | ಕೂಲಿ ಕೆಲಸ |
| ವಾಸ | : | ಕಾರ್ಗಳ್ಳಿ ಗ್ರಾಮ ತಿ. ನರಸೀಪುರ ತಾಲ್ಲೂಕು |

**ದಿನಾಂಕಃ 01.06.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

ಆರೋಪಿತರ ಪರಿಚಯವಿದೆ. ಅವರು ನಮ್ಮ ಗ್ರಾಮದವರು. ಚಾಸಾ-2 ನನ್ನ ಗಂಡ. ಚಾಸಾ-3 ರಿಂದ 5 ರವರ ಪರಿಚಯವಿದೆ.

ಸುಮಾರು ಐದು ವರ್ಷಗಳ ಹಿಂದೆ ಮಧ್ಯಾಹ್ನ 2.00 ಗಂಟೆಗೆ ನಮ್ಮ ಗ್ರಾಮದಲ್ಲಿರುವ ನಮ್ಮ 29 ಗುಂಟೆ ಜಮೀನಿಗೆ ನೀರು ಕೊಡುವಂತೆ ನಾನು 1 ನೇ ಆರೋಪಿತನನ್ನು ಕೇಳಿದ್ದೆ. ಆತ ನೀರನ್ನು ಅಡ್ಡಗಟ್ಟಿದ್ದನು. ಆ ನೀರು ಗಂಗಾ ಕಲ್ಯಾಣ ಯೋಜನೆಗೆ ಒಳಪಟ್ಟಿದ್ದು, ಅದನ್ನು ನನಗೆ, ರಾಚಯ್ಯ, ಸೋಮಣ್ಣ ಮತ್ತು ಬೊಗಸಯ್ಯ ರವರಿಗೆ ಮಾಡಲಾಗಿತ್ತು. 1 ನೇ ಆರೋಪಿತ ಸದರಿ ಬೊಗಸಯ್ಯ ರವರ ಜಮೀನನ್ನು ಮಾಡುತ್ತಿದ್ದರು.

ನಾನು ನೀರನ್ನು 1 ನೇ ಆರೋಪಿತನನ್ನು ಕೇಳಿದಾಗ ಆತ ತನಗೆ ನೀರು ಸಾಲುವುದಿಲ್ಲವೆಂದು ನನಗೆ ಹೇಳಿದ್ದು, ಆ ನೀರು ನಮಗೂ ಕೂಡ ಸೇರಬೇಕೆಂದು ಹೇಳಿದಾಗ ನನಗೆ ಅವಾಚ್ಯ ಶಬ್ದಗಳಿಂದ ಬೈದು, ನನಗೆ ಕೆಳಕ್ಕೆ ಕೆಡವಿ ದೊಣ್ಣೆಯಿಂದ ನನ್ನ ತಲೆಗೆ ಮತ್ತು ಮೈಕೈಗೆ ಹೊಡೆದಿರುತ್ತಾರೆ. 2 ಮತ್ತು

3 ನೇ ಆರೋಪಿತರು ನನಗೆ ಬೈದಿರುತ್ತಾರೆ. 1 ನೇ ಆರೋಪಿತ ನನ್ನ ತಲೆ ಕೂದಲನ್ನು ಹಿಡಿದು ಎಳೆದಾಡಿರುತ್ತಾನೆ.

ಚಾಸಾ-3 ಮತ್ತು 4 ರವರು ಗಲಾಟೆಯನ್ನು ಬಿಡಿಸಿರುತ್ತಾರೆ. ನಂತರ ನಾನು ತಿ. ನರಸೀಪುರದ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ. ಆ ವೇಳೆಗೆ ಪೊಲೀಸರು ಅಲ್ಲಿಗೆ ಬಂದು ದೂರನ್ನು ಪಡೆದಿರುತ್ತಾರೆ. ಅವರು ನನ್ನನ್ನು ಪೊಲೀಸ್ ಠಾಣೆಗೆ ಕರೆಸಿದ್ದರು. ದೂರಿಗೆ ನಾನು ನನ್ನ ಹೆಬ್ಬೆಟ್ಟಿನ ಗುರುತನ್ನು ಹಾಕಿರುತ್ತೇನೆ. ಆ ದೂರನ್ನು ನಾನು ಈಗ ನೋಡಿ ಗುರುತಿಸಿರುತ್ತೇನೆ. ಅದನ್ನು ನಿಪಿ.1 ಎಂದು ಗುರುತಿಸಲಾಯಿತು.

ದೂರನ್ನು ನೀಡಿದ ನಂತರ ನಾನು ಬೇರೆ ಕಡೆ ಹೋಗಿಲ್ಲ. ನಾನು ಘಟನೆಯ ಕುರಿತು ನ್ಯಾಯಾಲಯದಲ್ಲಿ ಹೇಳಿಕೆ ನೀಡಿರುತ್ತೇನೆ. ಸದರಿ ಹೇಳಿಕೆ ಮತ್ತು ಅದರಲ್ಲಿರುವ ನನ್ನ ಹೆಬ್ಬೆಟ್ಟಿನ ಗುರುತನ್ನು ಈಗ ನೋಡಿ ಗುರುತಿಸಿರುತ್ತೇನೆ. ಆ ಹೇಳಿಕೆಯನ್ನು ನಿಪಿ.2 ಎಂದು ಗುರುತಿಸಲಾಯಿತು.

**ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ಭಾಗಶ: ವಿರುದ್ಧವಾಗಿ ಸಾಕ್ಷ್ಯ ನುಡಿದಿರುವುದರಿಂದ, ಮಾನ್ಯ ಎಪಿಪಿ ರವರು ಸಾಕ್ಷಿಯನ್ನು ಭಾಗಶ: ಪಾಟೀ ಸವಾಲು ಮಾಡಲು ಕೋರಿದ್ದು, ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ಧವಾಗಿ ಭಾಗಶ: ಸಾಕ್ಷ್ಯ ನುಡಿದಿರುವುದರಿಂದ, ಮಾನ್ಯ ಎಪಿಪಿ ರವರ ಕೋರಿಕೆಯನ್ನು ಪರಿಗಣಿಸಿ ಸಾಕ್ಷಿಯನ್ನು ಭಾಗಶ: ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಸಿಸಿ ಸಂಖ್ಯೆ: 69/2018**

**ಪಾಟೀ ಸವಾಲುಃ ಮಾನ್ಯ ಎಪಿಪಿ ರವರಿಂದಃ**

ಆರೋಪಿತರು ನನಗೆ ಕೊಲೆ ಮಾಡುವುದಾಗಿ ಬೆದರಿಕೆ ಹಾಕಿದ್ದಾರೆ ಎಂದರೆ ಸರಿ. 2 ಮತ್ತು 3 ನೇ ಆರೋಪಿತರು ನನ್ನ ತಲೆ ಕೂದಲನ್ನು ಹಿಡಿದು ಎಳೆದಾಡಿ ಅವರ ಕೈಗಳಿಂದ ನನಗೆ ಹೊಡೆದರು ಎಂದರೆ ಸರಿಯಲ್ಲ. ನಾನು ಆ ಕುರಿತು ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯ ಹೇಳಿಕೆಯ ಆ ಭಾಗವನ್ನು ನಿಪಿ.3 ಎಂದು ಗುರುತಿಸಲಾಯಿತು.

ದಿನಾಂಕ 06.05.2017 ರಂದು ನಾನು ತೋರಿಸಿದಂತೆ ಪೊಲೀಸರು ಘಟನಾ ಸ್ಥಳದಲ್ಲಿ ಪಂಚನಾಮವನ್ನು ಜರುಗಿಸಿ ದೊಣ್ಣೆಯನ್ನು ಜಪ್ತಿಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಈಗ ತೋರಿಸಿದ ದಾಖಲೆ (ಪಂಚನಾಮ) ಯಲ್ಲಿ ನನ್ನ ಹೆಬ್ಬೆಟ್ಟಿನ ಗುರುತು ಇದೆ ಎಂದರೆ ಸರಿಯಲ್ಲ.

ನಾನು ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯವನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಶ್ರೀ ಎನ್.ಎಸ್. ವಕೀಲರಿಂದ ಆರೋಪಿತರ ಪರ**

ದೂರನ್ನು ನಾನು ಯಾವ ದಿನಾಂಕದಂದು ನೀಡಿದ್ದೇನೆ ಎಂದು ನನಗೆ ನೆನಪಿಲ್ಲ. ದೂರನ್ನು ಯಾರು ಬರೆದರು ಎಂದು ನನಗೆ ಗೊತ್ತಿಲ್ಲ. ದೂರಿನಲ್ಲಿ ಬರೆದ ವಿಷಯಗಳು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ, ನಾನೇ ಹೇಳಿ ಬರೆಸಿರುತ್ತೇನೆ.

**ಸಿಸಿ ಸಂಖ್ಯೆ: 69/2018**

ಈ ಮೇಲೆ ಹೇಳಿದ ಗಂಗಾ ಕಲ್ಯಾಣ ಯೋಜನೆಗೆ ನಾನು ಫಲಾನುಭವಿ ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ. ನೀರು ಕೊಡುವಂತೆ ಬೊಗಸಯ್ಯ ರವರ ಕುಟುಂಬದವರನ್ನು ಕೇಳಿದ್ದೇನೆ.

ನನ್ನ ಜಮೀನಿನ ಬಳಿ ಆರೋಪಿತರಿಗೆ ಸ್ವಂತ ಜಮೀನು ಇಲ್ಲ ಎಂದರೆ ಸರಿಯಲ್ಲ. ಆರೋಪಿತರು ಸದರಿ ಬೊಗಸಯ್ಯ ರವರ ಜಮೀನನ್ನು ಉಳುಮೆ ಮಾಡುತ್ತಿದ್ದರು ಎಂದು ತೋರಿಸಲು ದಾಖಲೆ ಇಲ್ಲ.

ಸದರಿ ಯೋಜನೆಗೆ ಯಾವುದೇ ಶುಲ್ಕವನ್ನು ಪಾವತಿಸುವಂತಿಲ್ಲ. ನಾನು ನೀರನ್ನು ಕೊಡುವಂತೆ 1ನೇ ಆರೋಪಿತನನ್ನು ಕೇಳಿದಾಗ ಬೇರೆ ಯಾರೂ ಇರಲಿಲ್ಲ.

ಘಟನೆಯ ವೇಳೆಗೆ ನಮ್ಮ ಜಮೀನಿನಲ್ಲಿ ಜೋಳದ ಬೆಳೆ ಇತ್ತು. ನನ್ನ ಗಂಡನಿಗೆ ಆರೋಪಿತರು ಹೊಡೆಯುತ್ತಿದ್ದರು ಎಂದು ನನ್ನ ದೂರಿನಲ್ಲಿ ಹೇಳಿದ್ದೇನೆ. ಆ ಬಗ್ಗೆ ಪೊಲೀಸರಿಗೆ ಹೇಳಿಲ್ಲ ಎಂದರೆ ಸರಿಯಲ್ಲ.

ಗಲಾಟೆಯಾದ ನಂತರ ನಾನು ಆಸ್ಪತ್ರೆಗೆ ಹೋಗಿದ್ದೆ. ಚಾಸಾ-3 ಮತ್ತು 4 ರವರು ಗಲಾಟೆಯಾದ ಮೇಲೆ ಸ್ಥಳಕ್ಕೆ ಬಂದರು. ನಾನು ಆಸ್ಪತ್ರೆಗೆ ಬಂದಾಗ ಮಧ್ಯಾಹ್ನ 3.00 ಗಂಟೆಯಾಗಿತ್ತು. ನಾನು ಆಸ್ಪತ್ರೆಯಲ್ಲಿ 12 ದಿನಗಳವರೆಗೆ ಒಳರೋಗಿಯಾಗಿದ್ದೆ. ಆ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ.

ನಾನು ಮೊದಲು ಪೊಲೀಸ್ ಠಾಣೆಗೆ ಹೋಗಿದ್ದು, ಆಸ್ಪತ್ರೆಗೆ ಹೋಗಿ ಬರುವಂತೆ ನನಗೆ ಪೊಲೀಸರು ಹೇಳಿದರು. ಮಧ್ಯಾಹ್ನ 3.00 ಗಂಟೆಗೆ ಠಾಣೆಗೆ ಹೋಗಿದ್ದೆ. ದೂರನ್ನು ನೀಡಿದ ನಂತರ ನಾನು ಆಸ್ಪತ್ರೆಗೆ ದಾಖಲಾಗಿದ್ದೆ.

ನಾನು ಹೇಳುವಂತೆ ಆರೋಪಿತರು ಯಾವುದೇ ಗಲಾಟೆ ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಮತ್ತು ನನಗೂ ನೀರಿನ ವಿಚಾರವಾಗಿ ಯಾವುದೇ ಸಂಬಂಧವಿಲ್ಲದೆ ಇದ್ದರೂ ಕೂಡ ಆರೋಪಿತರ ವಿರುದ್ಧ ಸುಳ್ಳು ದೂರು ನೀಡಿದ್ದೇನೆ

ಎಂದರೆ ಸರಿಯಲ್ಲ. ಕಳೆದ ಐದು ವರ್ಷಗಳಿಂದ ಘಟನೆಯಾದ ನಂತರ ನನ್ನ ಮತ್ತು ಆರೋಪಿತರ ನಡುವೆ ಮಾತುಕತೆ ಇರುವುದಿಲ್ಲ. ಅವರು ಮತ್ತು ನನ್ನ ನಡುವೆ ವೈಮನಸ್ಸು ಇರುವುದರಿಂದ ಅವರ ವಿರುದ್ಧ ಸುಳ್ಳು ಆಪಾದನೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ.

ನನಗೆ ಸರಾಯಿ ಕುಡಿಯುವ ಅಭ್ಯಾಸವಿದೆ ಎಂದರೆ ಸರಿಯಲ್ಲ. ನಾನು ಸರಾಯಿ ಕುಡಿದ ಅಮಲಿನಲ್ಲಿ ಆರೋಪಿತರಿಗೆ ಅವಾಚ್ಯ ಶಬ್ದಗಳಿಂದ ಬೈದು ಗಲಾಟೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಆ ರೀತಿ ಬೈಯುವುದರಿಂದ ಅವರು ಜಮೀನಿನ ಕಡೆ ಹೋಗುವುದಿಲ್ಲ ಎಂದರೆ ಸರಿಯಲ್ಲ. ನಾನು ಬಿದ್ದು ಪೆಟ್ಟು ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಆ ಗಾಯವನ್ನು ಉಪಯೋಗಿಸಿಕೊಂಡು ಆರೋಪಿತರ ವಿರುದ್ಧ ಸುಳ್ಳು ದೂರು ನೀಡಿ, ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)
ಓ ಹೇ ಕೇ ಸರಿ ಅದೆ

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದ. ತಿ.ನರಸೀಪುರ**